ಬದುಕಿನ ನೆಲೆಯಲ್ಲಿಟ್ಟು ವ್ಯಾಖ್ಯಾನಿಸಿದ್ದಾನೆ. ಅತಿಶಯವಾದ ಭೋಗ, ಸಾವು, ಯುದ್ಧ ಇವುಗಳಿಂದಾಗಿ ಜೀವನ ಅಸ್ಥಿರಗೊಳ್ಳುವ ಬಗೆಯನ್ನು ಪಂಪ ಅತ್ಯಂತ ಪರಿಣಾಮಕಾರಿಯಾಗಿ ನಿರೂಪಿಸುತ್ತಾನೆ. ಲಲಿತಾಂಗ–ಸ್ವಯಂಪ್ರಭೆಯ ಕಥೆಯಲ್ಲಿ ಮನುಷ್ಯನ ಮೂಲ ಪ್ರವೃತ್ತಿ ಭೋಗಾಪೇಕ್ಷೆ; ಅದು ಅತಿವ್ಯಾಮೋಹಕ್ಕೆ ಹೊರಳಿದರೆ ವ್ಯಕ್ತಿ ಅತೃಪ್ತಿಗಳಿಂದ ತೊಳಲ ಬೇಕಾಗುತ್ತದೆ ಎಂಬುದನ್ನು ಪ್ರತಿಪಾದಿಸಲಾಗಿದೆ. ಸುಖದಲ್ಲೇ ಮುಳುಗಿದವರಿಗೆ ದಿಢೀರನೆ ಬಂದೊದಗುವ ಆಘಾತಗಳನ್ನು ಸಹಿಸಲು ಸಾಧ್ಯವಾಗುವುದಿಲ್ಲ. ಸ್ವಯಂಪ್ರಭೆಯ ಸನಿಹದಲ್ಲಿ ಸಮೃದ್ಧ ಸುಖವನ್ನು ಅನುಭವಿಸುತ್ತಿದ್ದ ಲಲಿತಾಂಗನಿಗೆ ಆಯುಷ್ಯ ಮುಗಿಯುವ ಸೂಚನೆಗಳು ಕಾಣುತ್ತವೆ. ತನ್ನನ್ನು ಉಳಿಸಿಕೊಳ್ಳಿರೆಂದು ಎಲ್ಲರನ್ನೂ ಮೊರೆ ಹೋಗುತ್ತಾನೆ. ಅಗಲಿಕೆಯ ನೋವು ಮತ್ತು ಸಾವಿನ ಭಯದಿಂದ ತಲ್ಲಣಗೊಂಡ ಅವನಿಗೆ ಜೀವನದ ಅನಿತ್ಯತೆಯ ಬಗ್ಗೆ ಅರಿವು ಮಾಡಿಕೊಡುವುದು ಹೀಗೆ:

ನಿನಗೊರ್ವಂಗಲ್ಲವಸ್ಥಾಂತರಮಮರಜನಕ್ಕೆಲ್ಲಮೀಪಾಂಗೆ ಕಾರು
ಣ್ಯನಿನಾದಂ ನಿನ್ನನಾದಂ ನಗಿಸುಗುಮೆಳೆದುಯ್ವಂತಕಂಗಿಲ್ಲ ದೇವಾಂ
ಗನೆಯರ್ ಮಾರಾಂಪರೇ ಪೇಳ್ ಜನನ ಮೃತಿ ಜರಾತಂಕಶೋಕಾಗ್ನಿಯಿಂದಾ
ವೊನುಮೀ ಸಂಸಾರದೊಳ್ ಬೇಯದನೊಳನೆ ಶರಣ್ಧರ್ಮದಿಂದೊಂದುಮುಂಟೇ

ನಿನಗೊಬ್ಬನಿಗೇ ಅಲ್ಲ ಈ ಅವಸ್ಥೆ, ಎಲ್ಲ ದೇವತೆಗಳಿಗೂ ಉಂಟು. ಕರುಣೆಯನ್ನು ಹುಟ್ಟಿಸುವ ನಿನ್ನ ಅಳಲು ನಗೆಪಾಟಲು, ಸ್ವತಃ ಯಮನಿಗೇ ಮೃತ್ಯುವನ್ನು ಮೀರಲು ಸಾಧ್ಯವಿಲ್ಲ, ದೇವಾಂಗನೆಯರು ಸಾವಿಗೆ ಎದುರಾಗುವರೇ ಹೇಳು? ಜನನ, ಮರಣ, ಮುಪ್ಪು, ಆತಂಕ ಮತ್ತು ಶೋಕಾಗ್ನಿಗಳಿಂದ ಬೇಯದವನು ಈ ಲೋಕದಲ್ಲಿ ಇದ್ದಾನೆಯೆ? ಶರಣ್ಯವೆಂಬುದು ಧರ್ಮಕ್ಕಿಂತ ಬೇರಿಲ್ಲ. ಈ ಸನ್ನಿವೇಶದಲ್ಲಿ ಲಲಿತಾಂಗ–ಸ್ವಯಂಪ್ರಭೆಯರ ಅತೃಪ್ತ ಭೋಗ, ಪ್ರಣಯ, ವಿರಹಗಳು ಪ್ರಕಟವಾದರೂ, ಅದು ಆಧಿನಾಥನ ಮೋಕ್ಷಮಾರ್ಗಕ್ಕೆ ಹಿನ್ನೆಲೆಯಾಗಿ ಬಂದಿದೆ. ಅಂದರೆ, ಭೋಗವಿರತಿಗೆ ಮೂಲಕಾರಣ ಯಾವುದೆಂದರೆ ಉತ್ಕಟ ಭೋಗಾಕಾಂಕ್ಷೆ ಎಂಬುದನ್ನೇ ಈ ಪ್ರಸಂಗ ಸಾಬೀತುಪಡಿಸುತ್ತದೆ. ಆದಿಪುರಾಣವನ್ನು ಧಾರ್ಮಿಕ ಕಾವ್ಯವೆಂದೂ, ಭವಾವಳಿಗಳ ಗೊಂಚಲು/ಕಾಡು ಎಂದು ಭಾವಿಸಿದಾಗಲೂ ಇಂತಹ ಕಾವ್ಯ ಭಾಗಗಳು ಅದರ ನೀರಸತೆಯನ್ನು ಹೋಗಲಾಡಿಸುತ್ತವೆ.

ಆದಿ ತೀರ್ಥಂಕರನ ಭವಾವಳಿ ಕಥನಗಳು ಕವಿಯ ಧರ್ಮಾಭಿಮಾನವನ್ನು ಪ್ರಕಟಿಸುವ ಹಾಗೆಯೇ, ಒಂದೊಂದು ಸನ್ನಿವೇಶಗಳೂ ಪಂಪನ ಕಾವ್ಯಪರಿಣತಿಯನ್ನು ಸೂಚಿಸುತ್ತವೆ. ಜನ್ಮಜನ್ಮಾಂತರದ ಸಂಬಂಧ ಮುಂದುವರೆಯುತ್ತದೆ ಎನ್ನುವ ಹಾಗೆ ಲಲಿತಾಂಗ–ಸ್ವಯಂಪ್ರಭೆ ಇಬ್ಬರೂ ವಜ್ರಜಂಘ–ಶ್ರೀಮತಿಯಾಗಿ ಜನಿಸುತ್ತಾರೆ. ಶ್ರೀಮತಿಯ ಪೂರ್ವಜನ್ಮದ ಕಥಾವಳಿ ಅತ್ಯಂತ ಸ್ವಾರಸ್ಯಪೂರ್ಣವಾಗಿದೆ: "...ನಮ್ಮಮ್ಮನೂ ಅಜ್ಜಿಯೂ ಬೇರೆಯವರ ಸೇವಾ ಗೃಹದಲ್ಲಿದ್ದುಕೊಂಡು ಜೀವಿಸಲಾರಂಭಿಸಿದರು. ಒಂಬತ್ತು ತಿಂಗಳಾಗಿ ನಾನು ಹುಟ್ಟಿದೆನು. ನನ್ನ ದೇಹದ ದುರ್ಗಂಧಕ್ಕೆ ನೋಡಿದವರೆಲ್ಲರೂ ಅಸಹ್ಯಪಟ್ಟು ನನ್ನನ್ನು ದೂರೀಕರಿಸಿದರು. ನನ್ನ ಅಮ್ಮಂದಿರು ಮಸಣದಲ್ಲಿ ನನ್ನನ್ನು ಚಿಂದಿ ಬಟ್ಟೆಯಿಂದ ಮುಚ್ಚಿ ತಿರಿತಂದು ಹಾಕಿದ ಎಂಜಲುಗಳನ್ನು ತಿಂದು ನಾನು ಹೆಸರಿಲ್ಲದೆ ನಿರ್ನಾಮಿಕೆಯೆಂದು ಕರೆಯಲ್ಪಟ್ಟು ಬೆಳೆದೆನು." ಇದೊಂದು ಉಪಕಥೆಯಂತೆ ಕಂಡು ಬಂದರೂ, ನಿರ್ನಾಮಿಕೆ ಎಂಬುವಳ ದಾರುಣ ಜೀವನ ಚಿತ್ರ ಓದುಗನನ್ನು ಒಂದು ಕ್ಷಣ ತಡೆದು ನಿಲ್ಲಿಸುತ್ತದೆ. ಸ್ಮಶಾನದಲ್ಲಿ ಬಿದ್ದ ಚಿಂದಿ ಬಟ್ಟೆಗಳಿಂದ ಮುಚ್ಚಿ, ಎಂಜಲುಕೂಳಿನಿಂದ ಮಗುವನ್ನು ಸಾಕುವ ಸ್ಥಿತಿ